Mr. SPEAKER.—Hon'ble Members know that the Bill was introduced and they must have give notice of amendments well in time.

Sri S. SIVAPPA.—Sir, only two courses are open. Either time must be given to the amendments and they may be taken up tomorrow or if the Minister makes up his mind to refer this Bill to a Select Committee, it may be done.

Mr. SPEAKER.—It is a surprising remark that the Hon'ble Member is making. The Business Advisory Committee's Report, which was adopted on the last occasion, was that this must be finished within one hour.

Sri S. SIVAPPA.—In the programme, this Bill was placed after the Land Surcharge Bill and the Urban Taxation Bill. But, I am surprised to see that this has taken the precedenee in to-day's list. That way, we are taken by surprise.

Mr. SPEAKER.—What I propose is, we will discuss the Bill till the evening. Let the Hon'ble Minister's reply be over. Then, I will give half-an-hour tomorrow for the amendments and the third reading.

Sri V. S. PATIL.—Tentatively we agree with this proposal, because those thirty minutes will not be sufficient for the amendments.

Mr. SPEAKER.- The House had discussed the clauses threadbare. Forty-five minutes were taken up by Sri Muckannappa. If Sri V. S. Patil had intimated earlier that he would like to participate I would not have given him 45 minutes.

5 P.M.

I will allow the general Debate to be over today. The amendments will be taken up tomorrow.

†Sri V. S. PATIL.—Sir, this is one of the measures under which the Congress Governments throughout the country are trying to circumvent the provisions of our Constitution. According to terms of our Constitution every pie that is to be spent must be with the sanction of the Legislature of the State or the Lok Sabha. So in order to circumvent it and to get out of this difficulty, the Congress Governments at the Centre

(SRI V. S. PATIL)

as well as in the States, are creating such bodies in the names of different trades and avocations and professions and handing over these sums to those bodies and excluding them from the vote of the Legislature.

According to the Financial Memorandum all the fees collected for the S S.L.C. Examination were credited to the general revenues of the State and all the expenditure on the conduct of the examination and appointments, etc. were also debited to it. Naturally, those sums were included in the financial statement of the State for every year and we could discuss it and vote for the receipts and expenditure. That was our right. Now by this Bill this constitutional right of the legislature is being taken away and the Government want to have a body constituted under this enactment to hand over the management of this function to that body and the financial statement of the income and expenditure of that body is to be approved by the Government alone and it is not to come up before this House for discussion and vote. So it means that the present Bill is trying to deprive us of our legitimate rights under the Constitution. Whatever may be the amount involved, the basic principle that every pie spent out of the Consolidated Fund of the State must be voted upon by the Legislature is being negatived. This is not so simple a Bill as it is sought to be made out. That is why we on this side of the House are opposing such measures which seek to deprive the Legislature of its constitutional rights. All these bodies are being created by Government in order to serve their own purpose which cannot be said to be constitutional or legitimate, but something else. Now if this Bill had been for the betterment of education then we could have given our consent to it easily. But what is the intention? At present the Government is holding these elections. The same officers who have been enumerated in clause 4 are controlling it now. In spite of that, why should another body be constituted with the same powers but only excluding the control of the Legislature? If this Board had something to do really with educational matters, then our submission is that there are several Universities in our State which could have been entrusted with such function. These universities are concerned with the education of our youngsters who are to be taken up for higher studies or who are to be qualified as passed in secondary education. So our submission is that all these educational matters ought to have been entrusted to the universities themselves.

SRI S. R. KANTHI.—Do you mean to say that secondary education should be handed over to the Universities?

SRI V. S. PATIL.—After the secondary examination only those boys who get above a particular percentage of marks are taken up for higher education and not all. So this is really a testing examination for entrance to universities and so really it is the universities who would have been given the power to conduct these examinations and find out whether they are really eligible for university education.

SRI S. R. KANTHI.—Do you know the position in Maharashtra?

SRI V. S. PATIL.—At the beginning I have stated that the Congress Government is trying to supersede the constitutional rights of the Legislature by various methods. It is not a question of this Government

or the Maharashtra Government or the Madras Government; all the Governments are the same; they are run by the Congress men. There is no distinction at all. Why should we make any distinction at all except that there is difference between them in the matter of languages? The working is the same everywhere because of the Congress seal. According to my opinion, this testing board ought to have been handed over to the Universities and from the Universities an elected board ought to have been there. I would like to remind the Hon'ble House that when the British Raj was here, every Congress man from a four-anna member right upto the President of the Congress Organisation, was shouting at the top of his voice that this nomination should be scrapped, and that everybody should be elected according to the wishes of the people. But the moment the Congress people got into power, they have scrapped all elections and introduced nomination in every field of life. If we look to the constitution of the Board, it is really horrible. In clause 4 (4)A the *ex-officio* members are 11; in sub-clause B the elected members are two and in sub-clause C there are 19 nominated members. I do not know why the sub-clause B is at all inserted here. I would request the Hon'ble Minister to delete the word 'elected' there and substitute the word 'nominated'. That will clear the way for having a board of the Hon'ble Minister's choice to do any wrong things which can be protected by the Government.

Examinations are being held now. One of the Directors of Public Instruction of this State has clearly mentioned that leakages of Question papers is nothing. He has said, "I have passed my examination by such leakages; when I had appeared for so many examinations, I knew the papers, weeks before the commencement of the examination." This is the condition of these Government officers. They knew the papers before the commencement of the examination and that is why they got excellent marks and secured these jobs on the strength of those first-class marks. So many dirty things have cropped up. Leakages are there and it has become a money-making business. Papers were being sold in the bazaars before the commencement of the examination. That shows how the Government have inefficiently managed their own affairs so far as examinations are concerned, and if this board is set up, nobody is there to criticise. Suppose the board is constituted and papers are leaked, we cannot bring that matter into this House because the Legislature has nothing to do with the board or their functioning; it is controlled by the Government. Government has seen during last two years what severe criticism has been made on the Floor of the House in regard to leakage of papers and so on and in order to avoid that criticism and to avoid the criticism of the malpractices that are being indulged in, this board is sought to be set up and this Bill has been introduced in this august House. I submit that this a very retrograde measure and it must be thrown out as it seeks to deprive us of our right to discuss these matters on the Floor of this House.

In clause 11 they have introduced the words 'scandalous conduct'. What is meant by that? I do not know how my friend the Hon'ble Minister, if he remains for another period as the Education Minister, is going to interpret these words.

SRI S. R. KANTHI.—The Law Lexicon can be looked into; it has to be interpreted in a legal way.

SRI V. S. PATIL.—Perhaps my friend has not conducted any cases in which the scandalous conduct of any of his client is involved. That appears to be the reason why he is resorting to the dictionary meaning of these words. It has got one dozen meanings. So, it must be restricted to some thing concrete. It is very difficult to define it. Supposing a teacher while teaching in a school says that such and such a question is likely to come up in the ensuing examination and if the same question comes up and if somebody alleges that he has divulged the question, that might amount to scandalous conduct. After all, he might have venturned that guess by virtue of his experience. So, unnecessarily people may be harassed. It is difficult to define it and Government will also find it difficult to decide what is meant by scandlous conduct in a particular case.

If this Board is to be an indepedent one why Government should retain such tremendous hold on this body? For anything and everything the Board should come to Government for sanction. Even for making rules the Government should accord sanction. Unless they are sanctioned by Government, they are not workable. The Budget also should be approved by the Government. Everything is to be approved by Government. If that is so, where is the necessity of this Board?

SRI S. R. KANTHI.—It is the same thing in Universities also.

SRI V. S. PATIL.—If a mistake is committed elsewhere, the same thing should be repeated here also, is it so? Let us take the Salary and Allowances of the staff. It reads like this.

> "The salary and allowances of the Vice-Chairman, the Secretary and the other Officers and servants of the Board shall be met from the Consolidated Fund of the State. (2) The Board shall pay every year out of the Board fund to the State Government such amount as the State Government may determine on account of salary, pension leaves and other allowances of the Vice-Chairman, the Secretary and other Officers and Servants of the Board."

Why this provision has been made if the Board is to pay out of its own funds? Why Government should take that amount and pay it to these Officers? If they are the servants of the Board why the Board should not be held responsible for this? These are unnecessary round about ways in the working of the Board.

Clause 23: Termination of Examiners' appointment for misconduct or negligence: Here I would like to ask the Minister whether the Government is given the appellate power,-either to confirm or to modify, change or to cancel it. All these things must necessarily be given to appellate authority. The power given to Government cannot modify, and cannot confirm anything. Is that the intention of the Government? The Government is not allowed to confirm the order passed against any person.

SRI S. R. KANTHI.—Government can confirm or cancel it. The word "may" means that the Government may modify or reverse the order and they may also confirm it.

SRI V. S. PATIL.—The word 'may' does not mean "must". That is not so here. It may not modify or may not reverse it.

SRI S. R. KANTHI.—It does not mean that Government should not modify or reverse it. That word 'may' means the Government have the power of modifying or reversing or not.

SRI V. S. PATIL.—I would like to request you to see that the word "confirm" is inserted there. There is a omission of the word 'Confirm'. It is absolutely necessary to have the word 'Confirm' there, but not to leave this lacuna for future trouble. If you leave this as it is, you will have to trouble us agian by bringing an amendment in the next session or sometime later.

Clause 24, the Board s funds are described. Why this shirking of responsibility ? Why these words " if any " under (b) ? This was in vogue in the Government policy introduced by the Britishers. Whenever they did not want to do anything they usually inserted these words " if any ". By these words they could have escaped from any responsibility. That is the policy you are now adopting in this case. I request the Government to remove these words " if any ". Some responsibility must be there on Government contributing to the Boards funds.

Then the Annual and Financial Estimates contemplated in clause 25 must be brought before this House at least during this Session. This should not be allowed to be passed only by the Government. We must have the right at least to discuss it because it will be an expenditure under this Act ; so it will be a charged one. There are so many Boards they have created. At the start itself, I had told you that they want to shut up the door of criticism and keep it out of the Legislature in order to waste Public Funds. They want to evade the constitution. They want to avoid all this criticism. Even now, Government will do well to think twice before depriving this Hon'ble House, which is the representative of the people of the State, of discussing and voting on the accounts of this body. It should not be handed over completely to the Government.

5-30 P.M.

[MR. DEPUTY SPEAKER in the Chair.]

Then the power to make bye-laws and regulations is contained in clauses 26 and 31. Why Government should take the initiative to make bye-laws ? It is specifically stated in Cl. 31 : " No bye-law made under sub-section (1) shall have effect unless sanctioned by the State Government. " In Clause 27, it is stated : " No regulation made under section 26 shall have effect until it is sanctioned by the State Government. " What is all this for ? This is sheer waste of time. Is it the idea of our Hon'ble Minister that his Department is so efficient and so able to deal with these matters ? I know Sir, thousands of files are

(SRI V. S. PATIL)

pending in his Office; he himself will not be able to trace any of them; that is the chaotic condition of his Department and I do not know why he is taking up these powers?

I must thank the Hon'ble Chief Minister. He just came in time. These powers to sanction even rules and regulations and bye-laws, should not be taken by the Government. Let that body which is purely a creation of the Government do them. Why these ordinary rules of conduct of business, should be approved by the Government? This is unnecessary work for the Government and they will create so many troubles in the actual working of the body. So these powers should be deleted.

Then there is Clause 37 which bars suits, etc., for acts done in good faith.

"No suit or other legal proceeding shall lie in respect of anything in good faith done......against the Board or against any Committee constituted......or against the Chairman, or Vice-Chairman, Secretary or any other Officer or servant of the Board......"

We know what scandalous things are being done by the Examination Boards. They have brought disrepute to our State and to our Administration during all these years. If the Examiners or the members of the Board are Committees etc., who are interested in seeing that their sons, grand sons, relatives and friends, get higher percentages of marks, and who persuade the examiners or others connected with results, are allowed to go scot-free under the guise of Clause 37, then it will be a death-knell to the real administration of educational system. It is now well-known that a boy who gets a First Class here in our State, if he goes to another State for higher education, he does not pass even in the Third Class; the reason is: his First Classes obtained here are due to pressures, and this is really disgraceful. This clause will protect those persons who have committed this sort of misconduct. So, I submit that all these persons should not be protected and they must be held liable for punishment if, they leaked questions or persuaded examiners either to give more marks or in some cases, lesser marks. In this connection, I must say that there are instances of the latter kind also; certain persons not only persuade for awarding higher marks, they also try to see that lesser marks are given to particular inividuals.

I, therefore, sudmit that this Bill requires still greater study. After that, if it is felt that it is quite essential, then we may pass it. It should not be hurried up and passed; then it will create great trouble to our friend Sri Kanthi in the working of the Act.

SRI R. S. HEGDE (Honnawar).—I want to ask one clarification. He said that the Government has retained powers regarding sanction of bye-laws and regulations made by the Board. Supposing Government does not retain the power to sanction them and if, tomorrow after the constitution of the Board, the Board passed resolutions that there should be no examinations, or there should be oral examinations, or results declared only on impressions, what is the safeguard in the absence of these Sections?

Sri V. S. PATIL.—The constitution of the Board under Clause 4 clearly shows that 99 per cent of the Board members are Government servants working in that particular Department of Education. Can we expect such persons who are not only servants of the Department or of the particular Branch but also fed by the Government from time to time to pass such resolution or frame bye-law not to hold the examination?

Sri S. R. KANTHI.—The Hon'ble Speaker expressed that the general debate should be over today and the amendments should be taken up tomorrow. I require 15 to 20 minutes to reply.

Mr. DEPUTY SPEAKER.—As we have to finish the general discussion today Sri Gopal Gowda can have only ten minutes; I am sorry, it is not possible to give him more time.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ವಿದ್ಯಾ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕಂಥ ಸೆಕೆಂಡರಿ ಶಿಕ್ಷಣದ ಪರೀಕ್ಷೆಗೆ ಸಂಬಂಧಪಟ್ಟ ಹಾಗೆ ತಂದಿರುವ ವಿಧೇಯಕವನ್ನು ಮಾನ್ಯ ಸಭೆ ಚರ್ಚೆ ಮಾಡುತ್ತಾ ಇದೆ. ಶ್ರೀಮಾನ್ ಕಂಠಿಯವರು ಸಮಸ್ಯೆಯ ಸೃಷ್ಟಿಕರ್ತರು ಎಂದು ಹೇಳಬಹುದು. ಅವರು ಜೇನುಗೂಡಿಗೆ ಕೈಹಾಕುವುದರಲ್ಲಿ ನಿಸ್ಸೀಮರು. ಈಚೆಗೆ ಕೆಲವು ಸುಧಾರಣೆಗಳನ್ನು ಮಾಡುವುದಕ್ಕೆ ಹೊರಟರು. ಇಲ್ಲಿ ಒಂದು ತಂತಿ ಬಂದಿದೆ. ತಮ್ಮ ಕಡೆಗೆ ಕಳುಹಿಸುತ್ತೇನೆ. ತಾವು ಅವರಿಗೆ ಕಳುಹಿಸಬಹುದು. "Four students commenced fast unto death protesting against the withdrawal of free-ships and scholarships, pray best Cooperation," ಎಂದು ಅದರಲ್ಲಿ ಹೇಳಿದ್ದಾರೆ.

ಇನ್ನೊಂದು ಪ್ರಿಯಾರಿಟಿ ಮಾತ್ರ ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್‌ಗೆ ಸಂಬಂಧಪಟ್ಟದ್ದು. ಈಚೆಗೆ ಸೆಕೆಂಡರಿ ವಿದ್ಯಾಭ್ಯಾಸವನ್ನೇ ನಾವು ಉಚಿತಗೊಳಿಸಬೇಕಾಗುತ್ತದೆ. 2,400 ಆದಾಯವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ಅದೇ ಕಾಲಕ್ಕೆ ಅದೇ ಹೇಳಿಕೆಯಲ್ಲಿ ಬಡತನ, ಅರ್ಹತೆ ಇದ್ದವರಿಗೆ ಇದುವರೆಗೂ ಸರ್ಕಾರದವರು ವಿದ್ಯಾರ್ಥಿವೇತನ ಏನು ಕೊಟ್ಟುಕೊಂಡು ಬಂದಿದ್ದಾರೆ, ಅದನ್ನು ನಿಲ್ಲಿಸುತ್ತೇವೆಂದು ಹೇಳಿದರು. ಅವರು ಬಹುಶಃ ವಿದ್ಯಾ ಸಂಸ್ಥೆಯನ್ನು ಯಾವುದೋ ಒಂದು ಧರ್ಮ ಸಂಸ್ಥೆ, ಚಾರಿಟಿ ಸಂಸ್ಥೆ ಒಂದು ಛತ್ರ ಎಂದು ಭಾವಿಸಿದ ಹಾಗೆ ಕಾಣಿಸುತ್ತದೆ. ಏನೋ ಕೊಡುತ್ತಾ ಇದ್ದೇವೆ, ಅದಷ್ಟು ಕೈತೊಳೆದುಕೊಳ್ಳೋಣ ಎಂದು ಹಿಂದೆ ಇದ್ದ ಜಹಗೀರಿನ ರೀತಿ ಮಾಡಿ ಬಿಡೋಣ ಎಂದು ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ. ದೇಶದಲ್ಲೆಲ್ಲಾ ಡಂಗುರ ಹೊಡೆಯುತ್ತಾ ಇದ್ದಾರೆ ತಾವು ಉಚಿತವಾದ ಸೆಕೆಂಡರಿ ವಿದ್ಯಾಭ್ಯಾಸ ಕೊಡುತ್ತೇವೆ ಎಂದು. ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಈ ಒಂದು ವಿಷಯದ ಬಗ್ಗೆ ನಾನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕೂತುಕೊಂಡ ಹುಡುಗರ ಮೇಲೆ ನಾವು ಹಾಕತಕ್ಕ ಪರೀಕ್ಷಾ ಶುಲ್ಕ ವರ್ಷಕ್ಕೆ 32 ಲಕ್ಷ ರೂಪಾಯಿ ಆಗುತ್ತದೆ. ಅದನ್ನು ಏರಿಸಿಕೊಂಡು ಬಂದಿದ್ದೀರಿ ನಮ್ಮ ಕಾಲಕ್ಕೆ ವರ್ಷಕ್ಕೆ ಇದ್ದ ಇಡೀ ಫೀಸ್ ಬರೀ ಪರೀಕ್ಷಾ ಶುಲ್ಕ ಆಗಿದೆ. ಈಗ ನೀವು ಉಚಿತವಾದ ವಿದ್ಯಾಭ್ಯಾಸ ಕೊಡುತ್ತೀರಿ ಎಂದು ಹೇಳುತ್ತೀರಿ. ಆದರೆ ಸ್ಪೋರ್ಟ್ಸ್ ಫೀ, ಎಷ್ಟು ಇದೆ, ಎಕ್ಸ್‌ಕರ್ಷನ್ ಫೀ ಎಷ್ಟು ವಸೂಲು ಮಾಡುತ್ತೀರಿ? ಸರ್ಕಾರಿ ಶಾಲೆಗಳ ಮಾತು ನಾನು ಹೇಳುವುದು. ಖಾಸಗಿ ಶಾಲೆಗಳ ಮಾತು ಬಿಡಿ. ಇದನ್ನು ನಾವು ಉಚಿತ ವಿದ್ಯಾಭ್ಯಾಸ ಎಂದು ಕರೆಯೋಣವೇ?

ಶ್ರೀ ಎಸ್. ಆರ್. ಕಂಠಿ.—ಎಲ್ಲಾ ಸೇರಿ 18 ರೂಪಾಯಿ ಇದೆ. ಸ್ಪೋರ್ಟ್ಸ್ ಆಡಿಯೋ ವಿಜುವಲ್, ಆರ್. ಆರ್. ಫೀಸ್ ಎಲ್ಲಾ 18 ರೂಪಾಯಿಗಳು ಆಗುತ್ತವೆ.

ಶ್ರೀ ಎಸ್. ಗೋಪಾಲಗೌಡ.—ನಮ್ಮ ದೇಶದಲ್ಲಿ ಇರತಕ್ಕ ಬಡತನ ನಾವು ಗಮನಕ್ಕೆ ತೆಗೆದುಕೊಂಡರೆ ತಂದೆ ತಾಯಿಗಳಿಗೆ ತಮ್ಮ ಮಕ್ಕಳಿಗೆ ಬೇಕಾದಂಥ ಪುಸ್ತಕ ಮತ್ತು ಬಟ್ಟೆಬರೆ ಕೊಟ್ಟು ಅವರನ್ನು ಶಾಲೆಗಳಿಗೆ ಕಳುಹಿಸುವುದಕ್ಕೆ ಕಷ್ಟವಾಗುತ್ತದೆ. 10-12 ವರ್ಷದ ನಂತರ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ರೈತರು, ಮನೆಯಲ್ಲಿ ಕೆಲಸ ಮಾಡುವವನು ಶಾಲೆಗೆ ಹೋಗುತ್ತಾನೆ ಅನ್ನುವ ಅಭಿಪ್ರಾಯ ಹೊಂದಿರುತ್ತಾರೆ. ಮಾನ್ಯ ಸಚಿವರಿಗೆ ಆಡಿಕೆ ಜಗಿಯುತ್ತಾ ಜಗಿಯುತ್ತಾ ಅನೇಕ ವಿಷಯಗಳು ತಲೆಯಲ್ಲಿ ಹೊಳೆಯುತ್ತವೆ. ವಿದ್ಯಾ ಇಲಾಖೆ ಪ್ರಾಮುಖ್ಯವಾದ ಕೆಲಸ ಮಾಡಬೇಕು ಎಂದು ಮಾಡುವಾಗ ಸ್ಪಷ್ಟವಾದ ವಿಚಾರಗಳು ಮತ್ತು ಖಚಿತವಾದ ಅಭಿಪ್ರಾಯಗಳು ಅಲ್ಲಿ ಕಾರ್ಯಗತವಾಗುವಂತೆ ಮಾಡುವುದಿಲ್ಲ. ಈಗ 1957ನೇ ಇಸವಿಯಲ್ಲಿ ಇಂಟಿಗ್ರೇಷನ್ ಆದಮೇಲೆ ಉಪಾಧ್ಯಾಯರ ನಿವೃತ್ತಿ ವಯಸ್ಸು 55 ಎಂದು ಮಾಡಿದಿರಿ. ಆದರೆ ಟ್ರೈನ್ಡ್ ಟೀಚರ್ಸ್ 58ರ ತನಕ ಇಟ್ಟುಕೊಳ್ಳಬಹುದು ಎಂದು ಹೇಳಿದಿರಿ. ತಾವು ಬಂದಮೇಲೆ ಅದನ್ನು ನಿಲ್ಲಿಸಿ ಬಿಟ್ಟಿರಿ.

Sri S. R. KANTHI.—That was prevailing between 1954 and 1958 that is before reorganisation. Soon after reorganisation, it was again reduced to 55. I was not the Minister at that time. The Hon'ble Member should know that the Government is providing mid-day meals and also free text books to poor students.

ಶ್ರೀ ಎಸ್. ಗೋಪಾಲಗೌಡ.—1958 ರ ನಂತರದಲ್ಲಿ ಅದನ್ನು ಏರ್ಪಾಡು ಮಾಡಿದರು. ಮಧ್ಯೆ 400-500 ಜನ ಉಪಾಧ್ಯಾಯರು 55 ವರ್ಷ ದುಡಿದು ಒಳ್ಳೆಯ ತರಪೇತಾದ ಉಪಾಧ್ಯಾಯರು ಅನುಭವಸ್ಥರಾದ ಉಪಾಧ್ಯಾಯರು ಮನೆಗೆಹೋದರು. ಅವರು ಎಷ್ಟೋ ಮನವಿಗಳನ್ನು ಮಾಡಿಕೊಂಡರು. ಸುಪ್ರೀಂ ಕೋರ್ಟು ಕೂಡ ಜಡ್ಜ್‌ಮೆಂಟನ್ನು ಕೊಟ್ಟಿದ್ದಾರೆ. ಹಾಗೆ ಮನೆಗೆ ಕಳುಹಿಸಿದವರೆಲ್ಲರೂ 58 ವಯಸ್ಸಿನ ತನಕ ನೌಕರಿಯಲ್ಲಿ ಇದ್ದರು ಎಂದು ಭಾವಿಸಿಕೊಂಡು ಅವರಿಗೆಲ್ಲಾ ಸಂಬಳ ಕೊಡಬೇಕು ಎಂದು ಸುಪ್ರೀಂ ಕೋರ್ಟಿನ ತೀರ್ಮಾನ ಕೊಟ್ಟರೂ ಸರ್ಕಾರ ಅದನ್ನು ಕಾರ್ಯಗತ ಮಾಡಿಲ್ಲ. ಹೀಗೆ ಕೋರ್ಟುಗಳು ಎಷ್ಟೋ ಸಲ ಪ್ರೊಟೆಕ್ಷನ್ ಕೊಟ್ಟಿವೆ. ನಿಮ್ಮ ಆಜ್ಞೆಗಳು ತಪ್ಪು, ನಿಮ್ಮ ಕಾನೂನನ್ನು ನೀವು ಮರೆತಿದ್ದೀರಿ, ನೀವು ಇದನ್ನು ಕಾರ್ಯಗತ ಮಾಡುವುದಿಲ್ಲ; ಮಾಡಿಲ್ಲ ಎಂದು ಹೇಳಿದ ನೂರಾರು ಉದಾಹರಣೆಗಳು ಇವೆ.

ಶ್ರೀ ಎಸ್. ಆರ್. ಕಂಠಿ.—ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಹಳೇ ಪುರಾಣ ತೆಗೆದುಕೊಂಡು ಬಂದು ಹೇಳಿದರೆ ಏನು ಉಪಯೋಗ ?

ಶ್ರೀ ಎಸ್. ಗೋಪಾಲಗೌಡ.—ಹೇಗೆ ನಡೆದುಕೊಂಡು ಹೋಗುತ್ತಿದ್ದಾರೆ, ಎನ್ನುವ ಬಗ್ಗೆ ನಾನು ಹೇಳಿವೆ. ಸ್ವಾಮಿ, ತಾವು ಇದರ ಬಗ್ಗೆ ಬಹಳ ಕುತೂಹಲ ತೋರಿಸಿದಿರಿ. ಅಜೆಂಡಾದಲ್ಲಿ ಕಳಗೆ ಇದ್ದುದನ್ನು ಮೇಲೆ ತಂದಿರಿ. ಇದು ಅವಶ್ಯಕವಾಗಿ ಮಾಡಬೇಕಾದ ಕೆಲಸ, ಮಾಡಲೇ ಬೇಕು ಎಂದು ತಾವು ಏನು ಹೊರಟಿದ್ದೀರಿ ಅದಕ್ಕೆ ನಾನು ಕೆಲವು ಉದಾಹರಣೆಗಳನ್ನು ಹೇಳುತ್ತ ಹೋದರೆ ಬೇಕಾದಷ್ಟು ಇದೆ. ಈಗ ನೋಡಿ ಸ್ವಾಮಿ, ಫೀಸ್ 32 ಲಕ್ಷ ರೂಪಾಯಿ ಬರುತ್ತವೆ ತಾವು ಹೇಳಿದ ಪ್ರಕಾರ ಜಾಸ್ತಿ ಬರುತ್ತದೆ. ಬೇಕಾದಷ್ಟು ದುಡ್ಡು ಬರುತ್ತದೆ. 27 ಲಕ್ಷ ಖರ್ಚು ಹುಟ್ಟಿಕೊಳ್ಳುತ್ತದೆ. 'ಫೀಸ' ಬರುತ್ತದೆ ಎಂದು ಮಾಡುತ್ತಿದ್ದೀರಿ. ಅದಕ್ಕಾಗಿ ಇದುವರೆಗೂ ವಿದ್ಯಾ ಇಲಾಖೆಯವರು ಒಂದು ಘಟಕವನ್ನು ಇಟ್ಟುಕೊಂಡು ತನ್ಮೂಲಕ ಎಸ್. ಎಸ್. ಎಲ್. ಸಿ. ಪರೀಕ್ಷೆ ಮತ್ತು ಇತರ ಸಾರ್ವಜನಿಕ ಪರೀಕ್ಷೆಗಳನ್ನು ನಡೆಸುತ್ತಾ ಇದ್ದಿರಿ. ಆ ಬಗ್ಗೆ ದಕ್ಷವಾಗಿ ಎಸ್. ಎಸ್. ಎಲ್. ಸಿ. ಮತ್ತು ಇತರ ಪರೀಕ್ಷೆಗಳನ್ನು ಮಾಡುವುದಕ್ಕೆ ಸಕಾಲದಲ್ಲಿ ಫಲಿತಾಂಶವನ್ನು ಪ್ರಕಟಿಸುವುದಕ್ಕೆ ಇತ್ಯಾದಿ, ಇತ್ಯಾದಿ, ಕೆಲಸಗಳಿಗೆ ಒಂದು ಮಂಡಲಿಯನ್ನು ರಚಿಸುತ್ತೇವೆ ಎಂದು ತಾವು ಹೇಳಿದ್ದೀರಿ, ಮಾನ್ಯ ವಿ. ಎಸ್. ಪಾಟೀಲ್‌ರವರು ಹೇಳಿದರು, ಸರ್ಕಾರದವರು ಸಮಾಜವಾದದ ಹೆಸರಿನಲ್ಲಿ ಸಿಂಡಿಕಾಲಿಸಂ, ಕಾರ್ಪೊರೇಷನ್ ಮಾಡಿ ಕೈತೊಳೆದುಕೊಳ್ಳೋಣವೆಂದು ಇದ್ದಾರೆ. ಆಮೇಲೆ ಒಂದು ಹೇಳಿಕೆ ಕೊಟ್ಟರೂ ಆಯಿತು ಕೊಡದಿದ್ದರೂ ಆಯಿತು ಎಂದು, ಈಗ Remco ಬಗ್ಗೆ 4 ವರ್ಷಗಳಾದ ಮೇಲೆ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ರೀತಿ ಪಟವಾರೀಸ್ ಮತ್ತು ನವಾಬರನ್ನು ಸೃಷ್ಟಿಮಾಡಿಕೊಂಡು ಅವರು ಏನಾದರೂ ಮಾಡಿಕೊಟ್ಟರೆ, ನೀವು ಇಲ್ಲಿ ಹೇಳಿಕೆ ಕೊಡುತ್ತೀರಿ, ಆಗ ಅದು 'ಫೇಟ್‌ಅಕಂಪ್ಲೀ' ಆಗುತ್ತದೆ. ನಾವೂ ಏನೂ ಮಾಡಲು ಸಾಧ್ಯವಿಲ್ಲದೆ ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ. ರಾಜ್ಯಾಂಗಕ್ಕೆ ಸಂಬಂಧಪಟ್ಟಹಾಗೆ ಪ್ರಶ್ನೆ ಮಾಡಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೀರಿ. ನಮ್ಮ ಅಧಿಕಾರಿಗಳು ಯಾವ ರೀತಿಯಲ್ಲಿ ಬೆಳೆಯುತ್ತಿದ್ದಾರೆ ಎನ್ನುವ ವಿಚಾರ ಮಾಡೋಣ. ಅದರಲ್ಲಿ ಒಬ್ಬ ವೈಸ್-ಛೇರ್ಮನ್ ನೇಮಕ ಮಾಡಬೇಕು ಎಂದಿದೆ. ಅದರ ಬಗ್ಗೆ ಮಾನ್ಯ ಮುಕ್ಕಣ್ಣಪ್ಪನವರು 15 ಸಾವಿರ ರೂಪಾಯಿ ತನಕ ಖರ್ಚಾಗುತ್ತದೆ ಎಂದು ಹೇಳಿದ್ದಾರೆ.

ತಾವು ಹಿಂದೆ ಹೇಳಿದ್ದೀರಿ, ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಒಂದು ಮಂಡಲಿಯನ್ನು ಮಾಡುತ್ತೇವೆ ಎಂದು; ಹಾಗೆ ತಿಳಿದುಕೊಂಡಿದ್ದೆ, ಬರೀ ಪರೀಕ್ಷೆಗೆ ಒಂದು ಮಂಡಲಿ ಮಾಡುತ್ತೀರೆಂದು ನಾನು ತಿಳಿದುಕೊಂಡಿರಲಿಲ್ಲ. ಈಗ ಬರೀ ಪರೀಕ್ಷೆಗಳಿಗಾಗಿ ಒಂದು ಮಂಡಲಿಯನ್ನು ಮಾಡಿದ್ದೀರಿ. ಇದುವರೆಗೂ ವಿದ್ಯಾ ಇಲಾಖೆಯವರು ಇದನ್ನೆಲ್ಲಾ ನಿರ್ವಹಿಸುತ್ತಾ ಇದ್ದರು.

ಈಗ ತಾವು ಏನು ಮಾಡಿದ್ದೀರಿ ಎಂದರೆ, ಮೂರು ತರಹದ ಸದಸ್ಯರು ಇರುವಂತಹ ಒಂದು ಮಂಡಲಿಯನ್ನು ರಚಿಸಿದ್ದೀರಿ. ಅಧಿಕಾರದ ನೆಪದಿಂದ ಸದಸ್ಯರಾಗತಕ್ಕವರು—ಎಕ್ಸ್ ಅಫಿಶಿಯೋ ಮೆಂಬರ್ಸ್, ಚುನಾಯಿತ ಸದಸ್ಯರು, ನಾಮಕರಣ ಸದಸ್ಯರು; ಎಂದು ಮೂರು ತರಹದ ಸದಸ್ಯರು ಇದ್ದಾರೆ. ಈ ಮೂರು ತರಹ ಸದಸ್ಯರಲ್ಲಿ ಇನ್ನೊಂದು ಎಕ್ಸ್ಟ್ರಾರ್ಡಿನರಿ ಮೆಂಬರ್ಸ್ ಎಂದು ನಾಲ್ಕನೇ ಕೆಟಗರಿಯಲ್ಲಿ ಹದಿನಾಲ್ಕನೆಯ ಕ್ಲಾಸಿನಲ್ಲಿದೆ. ಅಲ್ಲಿ ಬೇಕಾದರೆ not exceeding three to be extraordinary members, ಎಂದು ಮಾಡುವುದು. ಈಗಿರುವ ಪ್ರಕಾರ 44 ಆಯಿತು. ಈ ಮೂರು ಸೇರಿ ಒಂದು ಸಣ್ಣ ಅಸೆಂಬ್ಲಿ ಆಯಿತು. ಗೋವಾದ ಅಸೆಂಬ್ಲಿಯ ರೀತಿ ತಾವು ಒಂದು ಬೋರ್ಡ್ ಕ್ರಿಯೇಟ್ ಮಾಡಿದ್ದೀರಿ.

ಇನ್ನೊಂದು ಕಡೆ ಏನು ಹೇಳುತ್ತಾರೆ ಎಂದರೆ, ಮಂಡಲಿ ಸರ್ಕಾರಕ್ಕೆ ಮತ್ತು ಡಿ. ಪಿ. ಐ. ಗೆ ವರದಿ ಇತ್ಯಾದಿಗಳನ್ನು ಕಾಲ ಕಾಲಕ್ಕೆ ಒಪ್ಪಿಸುತ್ತಿರಬೇಕು. ಚೇರ್‌ಮನ್, ವೈಸ್ ಚೇರ್‌ಮನ್ ಎಂದು ಒಂದು ಕಡೆ ಹೇಳಿದ್ದೀರಿ. ಡಿ. ಪಿ. ಐ. ಈ ಎಲ್ಲಾ ಮೀಟಿಂಗ್ಸ್‌ಗಳಿಗೆ ಪ್ರಿಸೈಡ್ ಮಾಡುತ್ತಾರೆ ಎಂದು ಹೇಳಿದ್ದೀರಿ. ವೈಸ್-ಚೇರ್‌ಮನ್‌ಗೆ ಅಲ್ಲಿನ ಆಗುಹೋಗುಗಳನ್ನು ನೋಡಿಕೊಳ್ಳುವುದಕ್ಕೋಸ್ಕರ ಅಧಿಕಾರವನ್ನು ಕೊಟ್ಟಿದ್ದೀರಿ. ಈ ಅಧಿಕಾರ ಮತ್ತು ಕರ್ತವ್ಯಗಳನ್ನು ಹೇಳಿದ ಕಡೆ, ಎಸ್. ಎಸ್. ಎಲ್. ಸಿ. ಗೆ ಪರೀಕ್ಷೆ ನಡೆಸುವುದು, ಟೀಚರ್ಸ್ ಸರ್ಟಿಫಿಕೇಟ್, ಎಗ್ಸಾಮಿನೇಷನ್ ಹೈಯರ್ ಮತ್ತು ಲೋಯರ್ ಮತ್ತು ಇತರ, ಸರ್ಕಾರದವರು ಆಗಾಗ್ಗೆ ಸೂಚನೆ ಕೊಡತಕ್ಕ ಪರೀಕ್ಷೆಗಳನ್ನು, ಈ ಮಂಡಲಿ ನಡೆಸಿಕೊಂಡು ಹೋಗತಕ್ಕದ್ದು ಎಂದು ತಾವು ಹೇಳಿದ್ದೀರಿ. ಇಲ್ಲಿ ಮುಖ್ಯವಾಗಿ ಈ ಎಗ್ಸಾಮಿನರ್ಸ್‌ನ್ನು ನೇಮಕ ಮಾಡುವಾಗ, ಸೂಪರ್‌ವೈಸರ್ಸ್‌ನ್ನು ನೇಮಕ ಮಾಡುವಾಗ, ಅವರ ರೆಮ್ಯುನರೇಶನ್ ಇತ್ಯಾದಿ ಇತ್ಯಾದಿಗಳನ್ನೆಲ್ಲಾ ನಮೂದು ಮಾಡುವಾಗ ಅನೇಕ ರಾಜಕೀಯಗಳು ದುರದೃಷ್ಟವಶಾತ್ ನಡೆದುಕೊಂಡು ಬಂದಿವೆ. ಈ ರಾಜಕೀಯ ಒತ್ತಡ, ಈ ಒಂದು ಮಂಡಲಿಯಲ್ಲಿ ಬರದಿರುವಂತೆ ತಾವೇನಾದರೂ ಮಾಡಿದ್ದೀರಾ ಎಂದು ನಾನು ನೋಡಿದೆ. ಆದರೆ ಅಂತಹದ್ದೇನೂ ಮಾಡಿಲ್ಲ. ತಾವು ಈ ಒಂದು ಸ್ವಾಟೂಟರಿ ಬಾಡಿಯನ್ನು ಸಿದ್ಧಪಡಿಸಿದರೂ ಕೂಡ ವಾಸ್ತವಿಕವಾಗಿ ಈ ಮಂಡಲಿಯು ನಿಮ್ಮ ಒಂದು ಕೈಗೂಸಾಗಿರುತ್ತದೆ. ನಿಮಗೋಸ್ಕರ ಸೃಷ್ಟಿ ಮಾಡಿದಂತಹ ಒಂದು ಬಾಡಿಯಾಗಿರುವುದರಿಂದ, ಯಾವಾಗಲೂ ವಿದ್ಯಾ ಮಂತ್ರಿಗಳು, ವಿದ್ಯಾ ಇಲಾಖೆಯ ಕಾರ್ಯದರ್ಶಿಯವರ ಕಡೆ ನೋಡಿ ಹೆಜ್ಜೆ ಹಾಕುತ್ತದೆಯೇ ಹೊರತು ಯಾವ ರೀತಿಯ ಸ್ವಾತಂತ್ರ್ಯವನ್ನು ಹೊಂದಿಲ್ಲ. ಇವತ್ತು ಇದಕ್ಕೆ ನೀವು ಹಣವನ್ನು ಕೊಡುವಾಗ, ಅವರು ಸಭೆಗಳನ್ನು ನಡೆಸುವಾಗ, ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ, ನೇರವಾಗಿ ಸರ್ಕಾರದವರ ಹಸ್ತಕ್ಷೇಪ ಈ ಮಂಡಲಿಯ ಮೇಲೆ ಯಾವತ್ತೂ ಇದ್ದೇ ಇದೆ. ಒಂದು ವೇಳೆ ಸರ್ಕಾರದವರು ಈ ಸೆಕೆಂಡರಿ ವಿದ್ಯಾಭ್ಯಾಸಕ್ಕೋಸ್ಕರ ಒಂದು ಉತ್ತಮವಾದ ಸ್ಕೀಮನ್ನು ತಯಾರು ಮಾಡಿ, ಅದರಂತೆ ಒಂದು ಸಂಸ್ಥೆ ಮಾಡಿ ಸಂಪೂರ್ಣವಾಗಿ ಈ ವಿದ್ಯಾಭ್ಯಾಸವನ್ನು ಅದು ನಡೆಸಿಕೊಂಡು ಹೋಗತಕ್ಕಂಥ ಒಂದು ಏರ್ಪಾಡು ಮಾಡುವುದಾಗಿದ್ದರೆ, ಆಗ ನನಗೆ ತುಂಬಾ ಸಂತೋಷವಾಗುತ್ತಿತ್ತು ಮತ್ತು ಅಲ್ಲಿ ಯಾವ ಅಸಮಾಧಾನಕ್ಕೂ ಆಸ್ಪದವಿರುತ್ತಿರಲಿಲ್ಲ. ಆದರೆ ಇವತ್ತು ಆ ಒಂದು ಗೊತ್ತಿದ್ದ ಕೆಲಸದ ವಿಭಾಗವನ್ನು ಮಾತ್ರ ವಿದ್ಯಾ ಇಲಾಖೆಯಿಂದ ಹೊರಗಡೆ ಎಳೆದು, ಆ ಕೆಲಸದಲ್ಲಿ ಸರ್ಕಾರ ಹಾಗೂ ವಿದ್ಯಾ ಇಲಾಖೆ ಎರಡೂ ಮಧ್ಯೆ ತಲೆ ಹಾಕುವಂತೆ ಈ ಒಂದು ಇಬ್ಬಂದಿ ಸಂಸ್ಥೆಯನ್ನು ಸೃಷ್ಟಿ ಮಾಡುವುದಕ್ಕೆ ಹೊರಟಿದ್ದಾರೆ. ಶ್ರೀಮಾನ್ ಅಣ್ಣಾರಾಯರು ಹೇಳಿದ ಹಾಗೆ ಹಣಕಾಸಿನ ವ್ಯವಸ್ಥೆ ಹೇಗೆ ನಡೆದುಕೊಂಡು ಹೋಗಬೇಕೆಂಬುದರ ಬಗ್ಗೆ ಇದರಲ್ಲಿ ಇಲ್ಲ. ಕ್ಲಾಸ್ 15 (g)ನಲ್ಲಿ "to receive bequests, donations endowments, trusts and transfers of any property or interest therein or right thereto" ಎಂದು ಹೇಳಿದೆ. ಇದನ್ನೆಲ್ಲಾ ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಪಡೆದುಕೊಳ್ಳಬಹುದು ಎಂದು ಹೇಳಿ 15ನೇ ವಿಧಿಯಲ್ಲಿ ತಾವು ಹೇಳಿದ್ದೀರಿ. ಮತ್ತು 20ನೇ ವಿಧಿಯಲ್ಲಿ ರಾಜ್ಯದ ಕನ್‌ಸೋಲಿಡೇಟೆಡ್ ಫಂಡಿನಿಂದ ಸಿಬ್ಬಂದಿ ವರ್ಗದ ಖರ್ಚನ್ನು ಒದಗಿಸಿ, ಆ ಮೇಲೆ ಬೋರ್ಡಿನವರು ಮರುಪಾವತಿ ಮಾಡುತ್ತಾರೆ ಎಂದು ಹೇಳಿದ್ದೀರಿ. ಆದರೆ ಸಿಬ್ಬಂದಿ ಯಾರು, ಏನು ಅವರ ಕೆಲಸ, ಅವರು 'ಲೆಂಟ್' ಆಫಿಸರ್ಸೇ? ಅಥವಾ ಬೋರ್ಡಿನ ಕೈಕೆಳಗೆ ಕೆಲಸಮಾಡತಕ್ಕವರೆ? ಎಂಬುದು ನಮಗೆ ಅಷ್ಟು ಸ್ಪಷ್ಟವಾಗಿಲ್ಲ. ಈ ತರಹ ತಾವು ಅಧಿಕಾರವನ್ನು ಕೊಟ್ಟು ಬಿಡುವುದರಿಂದ, ತಮಗೆ ಈ ಪರಿಕ್ಷೆಗಳನ್ನು ಮಾಡಿಸುವ ವಿಷಯದಲ್ಲಿ ಪೇಪರ್ಸ್ ಲೀಕ್ ಆಗಿ ಅದರಿಂದ ನಾನಾ ಅಪಾದನೆಗಳು ಬಂದು ಕೆಟ್ಟ ಹೆಸರು ಬರುವುದನ್ನು ತಪ್ಪಿಸುವುದಕ್ಕೋಸ್ಕರ ಈ ಒಂದು ಪ್ರತ್ಯೇಕವಾದ ಮಂಡಲಿಯನ್ನು ರಚನೆ ಮಾಡಿದ ಪಕ್ಷದಲ್ಲಿ ಅಪಾದನೆ ಎಲ್ಲವೂ ಕೂಡಾ ಮಂಡಲಿಗೆ ಬರಬಹುದು ಎಂಬ ಅಭಿಪ್ರಾಯವಿರಬಹುದು.

ನೀವು ವಿಧಾನ ಸಭೆಯಲ್ಲಿ ಉತ್ತರ ಕೊಡುವಾಗ ಮಾತ್ರ ಅದು ಮಂಡಲಿಯವರು ಮಾಡಿದ್ದಾರೆ, ನಾವು ಜವಾಬ್ದಾರರಲ್ಲ ಎಂದು ಹೇಳಬಹುದು. ಹಿಂದೆ ವಿದ್ಯಾರ್ಥಿಗಳು ಮುಷ್ಕರ ಹೂಡಿದಾಗ, ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೀರಿ. ಆ ತರಹ ಹೇಳುವುದಕ್ಕೋಸ್ಕರ ಮಾತ್ರ ನೇರವಾಗಿ ನಿಮಗೆ ಕಲ್ಲೇಟು ಬೀಳದ ಹಾಗೆ ಮಾಡಿಕೊಂಡು, ಬೋರ್ಡಿಗೆ ಹೊಡೆಯಿರಿ ಎಂದು ಮಾಡಿದ್ದೀರಿ. ಹಾಗೆ ಮಾಡಿದರೆ ಇದರ ಕೆಲಸ ತೃಪ್ತಿಕರವಾಗಿ ನಡೆಯುತ್ತದೆಯೇ? ಈಗಿರುವ ರಚನೆ ಪ್ರಕಾರ ಏನು ಮಾಡಿದ್ದೀರಿ ಎಂದರೆ, ಡಿ. ಪಿ. ಐ. ಚೇರ್‌ಮನ್ ಆಗಿರಬೇಕು, ಅದೇ ಇಲಾಖೆಯಲ್ಲಿರತಕ್ಕ ಒಬ್ಬ ಅಧಿಕಾರಿ ವೈಸ್-ಚೇರ್‌ಮನ್ ಆಗಿ ಪೂರ್ತಿ ಕೆಲಸಮಾಡಬೇಕು ಎಂದು. ಆದರೆ ಅದನ್ನು ಯಾವ ದರ್ಜೆಯ ಅಧಿಕಾರಿ ಎಂದು ಹೇಳಲಿಲ್ಲ. ಗೆಜೆಟ್ ನೋಟಿಫಿಕೇಶನ್ ಆಗುವುದರಿಂದ ಅವನು ಗೆಜಿಟೆಡ್ ಅಧಿಕಾರಿ ಇರಬೇಕೆಂದು ಭಾವಿಸುವುದಕ್ಕೆ ಅವಕಾಶ ಇದೆ. ಅವನು ಡಿ.ಪಿ.ಐ. ಯ ತಕ್ಷಣ ಕೆಳಗಿರತಕ್ಕವನೇ, ಅಥವಾ ವಿದ್ಯಾ ಇಲಾಖೆಯ ಮತ್ತು ಮಂತ್ರಿಗಳ ಅಪ್ಪಣೆಯಲ್ಲಿ

(ಶ್ರೀ ಎಸ್. ಗೋಪಾಲಗೌಡ)

ಅವರು ಯಾರನ್ನೂ ಬೇಕಾದರೂ ನೇಮಕ ಮಾಡಬಹುದೇ? ಇದನ್ನು ಯಾರು ನೇಮಕ ಮಾಡಬೇಕು? ಏಕೆಂದರೆ ಅವರು ಚುನಾವಣೆಯಲ್ಲಿ ಬರುವುದಿಲ್ಲ. ಅವರು ಯಾರು? ಅವರ ದರ್ಜೆ ಏನು? ಎನ್ನುವುದರ ಬಗ್ಗೆ ಏನೂ ಸ್ಪಷ್ಟವಾಗಿ ಹೇಳದೆ ಇಲ್ಲಿ ಕ್ಲಾಸ್ 4 (3)ರಲ್ಲಿ ಇಷ್ಟೇ ಬರೆದಿದ್ದಾರೆ :—

> "The State Government shall appoint by notification in the official Gazette an officer of the Department of Public Instruction to be the Vice-Chairman, and he shall be a wholetime officer of the Board. He shall hold office during the pleasure of the State Government."

ನಿಮಗೆ ಹಿಂದೆ ವೈಸ್-ಚಾನ್ಸೆಲರ್ ಸಿಕ್ಕದೆ ತಾವು ಎಷ್ಟೋ ಕಷ್ಟ ಪಟ್ಟಿದ್ದೀರಿ ಎಂಬುದನ್ನು ನಾವು ನೋಡಿದ್ದೇವೆ. ಈ ಸಂದರ್ಭದಲ್ಲಿ ಈ ವೈಸ್-ಚೇರ್‌ಮನ್‌ನ್ನು ಹುಡುಕುವುದಕ್ಕೆ ತಮಗೆ ಎಷ್ಟು ಕಷ್ಟವಾಗುತ್ತದೆ! ಏಕೆಂದರೆ ಇದರಲ್ಲಿ ಏನೊಂದೂ ಬರೆದಿಲ್ಲ. ಡಿ. ಪಿ. ಐ. ಯ ತಕ್ಷಣ ಕೆಳಗಿನವನೇ ಅಥವಾ ಬೇರೊಬ್ಬನು ಬರುತ್ತಾನೆಂದು ಬರೆದಿದ್ದರೆ ನಮಗೆ ಸಮಾಧಾನವಾಗ ತ್ತಿತ್ತು, ಇಂತಹವನೇ ಇಲ್ಲಿಗೆ ಬರುತ್ತಾನೆಂದು.

6-00 P. M.

ಆದುದರಿಂದ ಈ ಮಂಡಲಿಯು ಸರ್ವ ಅಧಿಕಾರವನ್ನು ವಹಿಸಿಕೊಳ್ಳುವುದರಿಂದ ಈ ಮಂಡಲಿಯ ಸದಸ್ಯರು ಯಾರು, ಚೇರಮನ್ ಯಾರು ಎಂಬುದನ್ನು ತಿಳಿಸಬೇಕು. ಈ ಕೆಲಸ ಬಹಳ ಜವಾಬ್ದಾರಿಯುತವಾದುದು. ಈ ಎಲ್ಲ ಕೆಲಸಗಳನ್ನೂ ಇವರ ನೇತೃತ್ವದಲ್ಲಿ ನಡೆಸಬೇಕಾಗಿರುವುದರಿಂದ ಈ ಹುದ್ದೆ ಯಾರಿಗೆ ಮೀಸಲಾಗಿರುತ್ತದೆ, ಈ ಹುದ್ದೆಗೆ ಯಾರು ಬರುತ್ತಾರೆ ಎನ್ನುವುದನ್ನು ಸ್ಪಷ್ಟಪಡಿಸಬೇಕಾದುದು ಅಗತ್ಯ ಎಂದು ನಾನು ಭಾವಿಸುತ್ತೇನೆ. ಆದುದರಿಂದ ಈ ಮಸೂದೆಯು ಸೆಲೆಕ್ಟ್ ಕಮಿಟಿಗೆ ಪರಿಶೀಲನೆಗಾಗಿ ಹೋಗಬೇಕು ಎಂದು ಶ್ರೀಮಾನ್ ಶಿವಪ್ಪನವರು ಸಲಹೆ ಮಾಡಿದ್ದಾರೆ. ಅಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಈ ಮಸೂದೆಯಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಬಹುದು. ಈ ಮಸೂದೆಯು ತುಂಬಾ ನ್ಯೂನತೆಗಳಿಂದ ತುಂಬಿದೆ. ಈ ಮಸೂದೆಯಲ್ಲಿರುವ ಹಾಗೆ ಸದಸ್ಯತ್ವಕ್ಕೆ ನಾಮಿನೇಟ್ ಮಾಡುವ ಒಂದು ಅನುಕೂಲತೆ ಇದೆ. ಉಪಾಧ್ಯಾಯರು ಅಲ್ಲದೇ ಇರತಕ್ಕಂಥವರು ನಾಮಕರಣವಾಗಿ ಬರಬಹುದು. ನಾಮಕರಣ ಮಾಡತಕ್ಕ ಪದ್ಧತಿಯ ಅನುಭವ ನಮಗೆ ಚೆನ್ನಾಗಿ ಇದೆ. ನಾಮಕರಣ ಮೂಲಕ ಯಾರ್‍ಯಾರು ಎಲ್ಲೆಲ್ಲಿ ಬರುತ್ತಾರೆ ಎಂಬುದು ಗೊತ್ತಿದೆ. ಒತ್ತಡದ ಮೂಲಕ ಯಾರಾದರೂ ಬಂದು ಬಿಡುತ್ತಾರೆ. ಆದ್ದರಿಂದ ಈ ಆರು ಜನರು ಯಾರು ಎಂಬುದು ಗೊತ್ತಾಗಲಿಲ್ಲ. ಸರ್ಕಾರ ಆರು ಜನ ಸದಸ್ಯರನ್ನು ನಾಮಕರಣ ಮಾಡಬೇಕೆಂದು ಹೇಳಿರುವುದು ಅಸ್ಪಷ್ಟವಾಗಿದೆ. ಈ ಆರು ಜನರಲ್ಲಿ ಹೆಡ್ ಮಾಸ್ಟರ್ ಇರುವುದಿಲ್ಲ, ಸೆಕೆಂಡರಿ ಸ್ಕೂಲ್ ಟೀಚರ್ಸ್ ಇರುವುದಿಲ್ಲ ಅಂದರೆ ಅವರನ್ನು ನಾಮಿನೇಟ್ ಮಾಡುವುದಿಲ್ಲ. ಹಾಗಾದರೆ ಈ ಆರು ಜನರು ಯಾರು? ಇದರಲ್ಲಿ ಕೈವಾಡಕ್ಕೆ ಅವಕಾಶವಿದೆ. ನಾಮಕರಣದ ವಿಷಯದಲ್ಲಿ ತುಂಬಾ ಕಟುವಾದ ಅನುಭವ ಬಂದಿದೆ. ಆದುದರಿಂದ ಈ ಸಂದರ್ಭದಲ್ಲಿ ಮಾನ್ಯ ವಿದ್ಯಾ ಸಚಿವರ ಗಮನಕ್ಕೆ ಇದನ್ನು ತರುತ್ತೇನೆ. ಈ ಮಸೂದೆಯು ಸೆಲೆಕ್ಟ್ ಕಮಿಟಿಗೆ ಹೋಗಿ ಬರಬೇಕು.

ಈಗ ಕಾಲಾವಕಾಶ ಇಲ್ಲದೇ ಇರುವುದರಿಂದ ಮಾತನಾಡುವುದಕ್ಕೆ ಇನ್ನು ಹೆಚ್ಚು ವೇಳೆ ತೆಗೆದುಕೊಳ್ಳುವುದಿಲ್ಲ. ಕೊನೆಯದಾಗಿ ಒಂದು ಮಾತು ಹೇಳಲು ಇಷ್ಟಪಡುತ್ತೇನೆ. ಈ ಮಸೂದೆಯನ್ನು ಅವಸರದಲ್ಲಿ ಪಾಸು ಮಾಡಿಕೊಂಡು ನೋಟಿಫಿಕೇಷನ್ ಹೊರಡಿಸಿ ಇದೇ ವರ್ಷ ಜಾರಿಯಲ್ಲಿ ಬರುವಂತೆ ಮಾಡಿ ಒಳ್ಳೆ ಹೆಸರು ದೊರಕಿಸುವಂತೆ ಮಾಡಬೇಕೆಂದು ಮಾನ್ಯ ವಿದ್ಯಾ ಸಚಿವರು ಇಚ್ಛಿಸಿರುವ ಹಾಗೆ ಕಾಣುತ್ತದೆ. ಈಗಾಗಲೇ ಯಾರು ಯಾರನ್ನು ನೇಮಕ ಮಾಡಬೇಕು ಎಂಬುವನ್ನು ಗೊತ್ತುಮಾಡಿರುವ ಹಾಗೆ ಕಾಣುತ್ತದೆ. ಆದರೆ ನಾನು ಹೇಳುವುದು ಇಷ್ಟೇ: ಈ ಮಸೂದೆ ಈ ವರ್ಷ ಜಾರಿಗೆ ಬರುವುದು ಬೇಡ. ಸ್ವಲ್ಪ ದಿವಸ ಕಾನೂನು ಕಡಿತಕ್ಕೆ ಏರಿಸದೆ ಇದನ್ನು ಜಾರಿಗೆ ತರುವುದು ನಿಧಾನವಾಗಿ ಮಾಡೋಣ. ಸದ್ಯಕ್ಕೆ ಇರತಕ್ಕ ರೀತಿಯಲ್ಲಿಯೇ ಪರೀಕ್ಷೆಗಳನ್ನು ನಡೆಸುತ್ತೇವೆ ಎಂದು ಅವರು ಆಶ್ವಾಸನೆ ಕೊಡಬೇಕು ಎಂದು ಹೇಳುತ್ತೇನೆ.

Sri S. R. KANTHI.—"Short Title extent and commencement ನಲ್ಲಿ 'it shall come into force on such date as the State Government may by notification appoint" ಎಂದು ಇದೆ.

ಶ್ರೀ ಎಸ್. ಗೋಪಾಲ ಗೌಡ.—ಒತ್ತಾಯದಿಂದ ನೋಟಿಫಿಕೇಷನ್ ಹೊರಡಿಸಿ ಇದೇ ವರ್ಷ ಜಾರಿಗೆ ತರಬಹುದು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಒಳ್ಳೆಯದು ಇದ್ದರೆ ಇವತ್ತೇ ಮಾಡುತ್ತೇವೆ.

ಶ್ರೀ ಎಸ್. ಗೋಪಾಲ ಗೌಡ.—ಇನ್ನು ವೈಸ್ ಚೇರ್‌ಮನ್ ನೇಮಕ ಮಾಡುವುದಕ್ಕೆ ಎಷ್ಟು ದಿವಸ ಹಿಡಿಯುತ್ತದೆ ? ಈಗಾಗಲೇ ವಿದ್ಯಾ ಇಲಾಖೆಯಲ್ಲಿ ಏನೇನು ಕ್ರಮ ತೆಗೆದುಕೊಂಡಿದ್ದಾರೆ ? ಅದನ್ನು ನಾವು ತಿಳಿದುಕೊಳ್ಳಬೇಕು. ಈ ಹೊಸ ವ್ಯವಸ್ಥೆಯನ್ನು ಜಾರಿಗೆ ತರುವುದು ಅವಸರದಲ್ಲಿ ಮಾಡಬಾರದು. ಈ ವರ್ಷ ಹೊಸ ವ್ಯವಸ್ಥೆ ಅವಸರದಲ್ಲಿ ತರುವುದು ಮಾಡಬಾರದೆಂದು ಮತ್ತೊಮ್ಮೆ ಹೇಳಿ ನನ್ನ ಮಾತು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಸಭೆ ಈಗ ಮುಕ್ತಾಯವಾಗಿ ನಾಳೆ ಪುನಃ ಒಂದು ಗಂಟೆಗೆ ಸೇರುತ್ತದೆ.

The House adjourned at Five Minutes past Six of the Clock to meet again at One of the Clock on Thursday the 24th February 1966.